225 (12) : ಶ್ರೀ ಬೋಪಯ್ಯ .ಕೆ.ಜಿ. (ಮಡಿಕೇರಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಸೈನಿಕ ಶಾಲೆ ಸ್ಥಾಪಿಸಲು ಪ್ರಸ್ತುತ ಸಾಲಿನ ಮುಂಗಡ ಪತ್ರದಲ್ಲಿ ರೂ. 1.00 ಕೋಟಿ ಹಣ ಮೀಸಲಿಟ್ಟು ಸೈನಿಕ ಶಾಲೆ ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಇದರ ಸ್ಥಾಪನೆಗೆ ವಿಳಂಬವಾಗಲು ಕಾರಣಗಳೇನು, ಇದು ಎಂದಿನಿಂದ ಪ್ರಾರಂಭವಾಗುತ್ತಿದೆ; ಈಗ ಅದು ಯಾವ ಹಂತದಲ್ಲಿದೆ?

ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

226 (14) : ಶ್ರೀ ಬೋಪಯ್ಯ ಕೆ.ಜಿ. ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋದಲ್ಲಿ ಹಾಲಿ ಇರುವ ಬಸ್ಸುಗಳೆಷ್ಟು;

ಆ) ಇವುಗಳಲ್ಲಿ ಉಪಯೋಗಕ್ಕೆ ಬಾರದ ಬಸ್ಸುಗಳು ಸಂಖ್ಯೆ ಎಷ್ಟು;

ಇ) ಹೊಸ ಬಸ್ಸುಗಳ ಬೇಡಿಕೆ ಎಷ್ಟಿದೆ;

ಈ) ಇವುಗಳ ಬಗ್ಗೆ ಸರ್ಕಾರಿ ಕೈಗೊಂಡ ಕ್ರಮಗಳೇನು?

ಉ) ಕೊಡಗು ಜಿಲ್ಲೆಯಲ್ಲಿ ಎಷ್ಟು ಗ್ರಾಮೀಣ ಸಾರಿಗೆ ಬಸ್ಸುಗಳು ಓಡಾಡುತ್ತಿವೆ; ಎಷ್ಟು ಗ್ರಾಮೀಣ ಸಾರಿಗೆ ಬಸ್ಸುಗಳ ಬೇಡಿಕೆ ಇದೆ;

ಊ) ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 87.

ಆ) ಇಲ್ಲ.

ಇ) 1 ಬಸ್ಸಿಗೆ ಬೇಡಿಕೆ ಇದೆ.

ಈ) ಬೇಡಿಕೆಯನ್ನು ಸಧ್ಯದಲ್ಲೇ ಪೂರೈಸಲಾಗುವುದು.

ಉ) 6, 18.

ಊ) ಹಂತ ಹಂತವಾಗಿ ಸಾರಿಗೆಯ ಸೇವೆಯನ್ನು ಒದಗಿಸಲಾಗುವುದು.

227 (17) : ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಸೈನಿಕ ಕಲ್ಯಾಣ ಇಲಾಖೆಯಲ್ಲಿ ಉಪ ನಿರ್ದೇಶಕರ ಹುದ್ದೆಯನ್ನು ತೆಗೆದುಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಜಿಲ್ಲೆಯಲ್ಲಿ ಮಾಜಿ ಸೈನಿಕರು ಅತೀ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಈ ಹುದ್ದೆಯನ್ನು ಉಳಿಸಿಕೊಳ್ಳಲು ಮಾಜಿ ಸೈನಿಕರು ಸಲ್ಲಿಸಿದ ಮನವಿ ಬಗ್ಗೆ ಕೈಗೊಂಡ ಕ್ರಮವೇನು?

ಇ) ಈ ಇಲಾಖೆಯಿಂದ ಮಾಜಿ ಸೈನಿಕರಿಗೆ ಒದಗಿಸಲ್ಪಡುವ ಸೌಲಭ್ಯಗಳಾವುವು; ವಿವರವಾದ ಮಾಹಿತಿಯನ್ನು ಕೊಡುವುದು.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಕೊಡಗು ಜಿಲ್ಲೆಯಲ್ಲಿರುವ ಉಪ ನಿರ್ದೇಶಕರು ಹುದ್ದೆಯನ್ನು ತೆಗೆದು ಹಾಕಿರುವುದಿಲ್ಲ.

ಆ) ಕೊಡಗು ಜಿಲ್ಲೆಯಲ್ಲಿರುವ ಉಪ ನಿರ್ದೇಶಕರ ಹುದ್ದೆಯನ್ನು ತೆಗೆದುಹಾಕಿರುವುದಿಲ್ಲವಾದ್ದರಿಂದ ಮಾಜಿ ಸೈನಿಕರ ಮನವಿಯ ಮೇಲೆ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ.

ಇ) ಅನುಬಂಧ ಲಗತ್ತಿಸಿದೆ.

ಅನುಬಂಧ

ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು : ಯುದ್ಧ ವಿಧವೆಯರಿಗೆ ನೀಡುತ್ತಿರುವ ಸೌಲಭ್ಯಗಳು

1. ಸರ್ಕಾರಿ ಸ್ವಾಮ್ಯದ ಮಂಜೂರಾತಿ ಪ್ರಾಧಿಕಾರದಲ್ಲಿ ಮತ್ತು ಕರ್ನಾಟಕ ಗೃಹ ಮಂಡಳಿಯಲ್ಲಿ ಯೋಧರಿಗೆ ಮತ್ತು ಮಾಜಿ ಸೈನಿಕರಿಗೆ ಶೇಕಡಾ 10 ರಷ್ಟು ನಿವೇಶನ : ಗೃಹಗಳನ್ನು ಮಂಜೂರಾತಿಯಲ್ಲಿ ಕಾಯ್ದಿರಿಸಿದೆ ಎಲ್ಲಾ ಯುದ್ಧ ಸಂತ್ರಸ್ಥರಿಗೆ ಉಚಿತ ನಿವೇಶನ.
2. ಈ ಕೆಳಗಿನಂತೆ ತಾಂತ್ರಿಕ ಶಿಕ್ಷಣದಲ್ಲಿ ಸೇವಾ ನಿರತ : ಮಾಜಿ ಸೈನಿಕರ ಮಕ್ಕಳಿಗೆ ಸೀಟುಗಳನ್ನು ಕಾಯ್ದಿರಿಸಲಾಗಿದೆ:–
   (ಅ) ಪಾಲಿಟೆಕ್ನಿಕ್ ದಲ್ಲಿ ಲಭ್ಯ ಇದ್ದ ಸೀಟುಗಳಲ್ಲಿ ಶೇಕಡಾ 2.5
   (ಆ) ಟಿ.ಸಿ.ಹೆಚ್. ದಲ್ಲಿ 20 ಸೀಟುಗಳು.
   (ಇ) ಬಿ.ಎಡ್. ದಲ್ಲಿ 15 ಸೀಟುಗಳು.
   (ಈ) ಇಂಜನಿಯರಿಂಗ್ 70 + 50 (ಒಟ್ಟು 120)
   (ಉ) ವೈದ್ಯಕೀಯ 6 ಮತ್ತು ಬಿಡಿಎಸ್ 2
   (ಊ) ಕೃಷಿ ಮತ್ತು ಐಟಿಐ ಶೇಕಡಾ 2.5
   ಸೈನ್ಯಕ್ಕೆ ಸೇರುವಾಗ ಯಾರು ತಮ್ಮ ಖಾಯಂ ವಿಳಾಸವನ್ನು ಕರ್ನಾಟಕರವರೆಂದು ನೀಡಿರುತ್ತಾರೋ ಅವರು ಮಾತ್ರ ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.
3. ಶಿಷ್ಯ ವೇತನ
4. ಸೈನಿಕ ವಿಶ್ರಾಂತಿ ಸೌಲಭ್ಯ.
5. ಎರಡನೇ ಮಹಾಯುದ್ಧದ ಮಾಜಿ ಯೋಧರು ಮತ್ತು ಮೃತ ಯೋಧರ ವಿಧವೆಯರಿಗೆ ರೂ. 500 ಗೌರವಧನ.
6. ಸೇವಾ ನಿರತ : ಮಾಜಿ ಸೈನಿಕರ ಹೆತ್ತವರಿಗೆ ನಗದು ಯುದ್ಧ ಪ್ರಶಸ್ತಿ ಈ ಕೆಳಗಿನಂತೆ ನೀಡಲಾಗುತ್ತಿದೆ:

(ಅ) ಒಬ್ಬ ಮಗನಿಗೆ ರೂ. 450
(ಆ) ಇಬ್ಬರು ಮಕ್ಕಳಿಗೆ ರೂ. 600
(ಇ) ಮೂವರು ಮಕ್ಕಳಿಗೆ ರೂ. 750

7. ಐಟಿಐ ದಲ್ಲಿ ಕಲೆಯುತ್ತಿರುವ ಮಾಜಿ ಸೈನಿಕರ : ಯುದ್ಧ ವಿಧವೆಯದ ಮಕ್ಕಳಿಗೆ ಪ್ರತಿ ತಿಂಗಳು ರೂ. 250 ಸ್ಟೈಪಂಡ್.
8. ಎಲ್ಲಾ 'ಎ', 'ಬಿ', 'ಸಿ' ಮತ್ತು 'ಡಿ' ಹುದ್ದೆಗಳಲ್ಲಿ ಶೇಕಡಾ 10 ರಷ್ಟು ಮೀಸಲಾತಿ.
9. ಶೌರ್ಯ : ಶೌರ್ಯರೇತರ ಪ್ರಶಸ್ತಿ ವಿಜೇತರಿಗೆ ನಗದು ಅನುದಾನ
10. ಮಾಜಿ ಸೈನಿಕರು ತೀರಿಕೊಂಡಾಗ ಅವರ ಹೆಂಡತಿ ಅಥವಾ ಅವರ ಮಕ್ಕಳಿಗೆ ರೂ. 1500 ಗಳ ಮರಣ ಪರಿಹಾರಧನ ಸಹಾಯ.
11. ಒಂದು ಆಸ್ಪತ್ರೆಯಿಂದ ಇನ್ನೊಂದು ಮಿಲಿಟರಿ : ಸಿವಿಲ್ ಆಸ್ಪತ್ರೆಗೆ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು ವರ್ಗವಣೆಯಾದಾಗ ರೂ. 1000 ರ ವರೆಗಿನ ಪ್ರಯಾಣ ವೆಚ್ಚ.
12. ಕನ್ನಡಕ, ಶ್ರವಣ ಯಂತ್ರ ಖರೀದಿಯ ವೆಚ್ಚವನ್ನು ರೂ. 400 ರಿಂದ ರೂ. 3000 ರ ವರೆಗೆ ಮರು ಪಾವತಿ.
13. ವಿಧವೆಯರು : ಅವಿವಾಹಿತ ಮಾಜಿ ಸೈನಿಕರ ಮಕ್ಕಳಿಗೆ ಹೊಲಿಗೆ ಯಂತ್ರ ಖರೀದಿಯಲ್ಲಿ ರೂ. 1000 ಗಳ ಸಬ್ಸಿಡಿ.
14. ಮಾಜಿ ಸೈನಿಕರು ಮತ್ತು ಅವರ ಅವಲಂಬಿತರಿಗೆ ರೂ. 1000 ಗಳ ವರೆಗೆ ಸ್ಥಳೀಯ ಧನ ಸಹಾಯ.
15. ಆರ್ಥಿಕವಾಗಿ ಹಿಂದುಳಿದ ಮಾಜಿ ಸೈನಿಕರು : ಅವಲಂಬಿತರಿಗೆ ರೂ. 1200 ಗಳ ವಾರ್ಷಿಕ ಧನ ಸಹಾಯ.
16. ಭೂ ಸುಧಾರಣೆ ಮತ್ತು ಬಾಡಿಗೆ ನಿಯಂತ್ರಣ ಕಾಯ್ದೆಯಲ್ಲಿ ವಿಶೇಷ ಆದ್ಯತೆ.
17. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಸೌಲಭ್ಯ.
18. ರಾಜ್ಯ ಸರ್ಕಾರದಲ್ಲಿ ಮರು ನೇಮಕಗೊಂಡ ಮಾಜಿ ಸೈನಿಕರಿಗೆ ವೇತನ ನಿಗದಿಕರಣ ಹಾಗೂ 8 ವರ್ಷಗಳ ಹೆಚ್ಚಿನ ಸೇವಾ ಅವಧಿ ಸೌಲಭ್ಯ.
19. ಮಾಜಿ ಸೈನಿಕರಿಗೆ ಸಿವಿಲ್ ಉದ್ಯೋಗಕ್ಕಾಗಿ ಒಟ್ಟು ಸೇವಾವಧಿ ಮತ್ತು ಮೂರು ವರ್ಷಗಳ ವಯೋಮಿತಿ ಸುಲಿಕೆ.
20. ಪ್ರತಿಯೊಂದು ಜಿಲ್ಲೆಯ ಎರಡು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ರೂ. 300 ರಿಂದ ರೂ. 750 ಗೌರವಧನ.
21. ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜು ಮತ್ತು ನ್ಯಾಶನಲ್ ಡಿಫೆನ್ಸ್ ಅಕಾಡಮಿ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದಿಂದ ಶಿಷ್ಯ ವೇತನ.
22. ನಿವೃತ್ತ ಸೇನಾಧಿಕಾರಿಗಳಿಗೆ ಬೆಂಗಳೂರಿನಲ್ಲಿ ತಂಗಲು ವಿಶ್ರಾಂತಿ ಗೃಹ.
24. ಅಥನಿ, ಬೆಳಗಾವಿ, ಕಾರವಾರದಲ್ಲಿ ವಿದ್ಯಾರ್ಥಿ ಹಾಗೂ ಧಾರವಾಡದಲ್ಲಿ ವಿದ್ಯಾರ್ಥಿನಿಲಯದ ವಸತಿ ನಿಲಯ.

ಯುದ್ಧ ಹಾಗೂ ಅಪರೇಶನ್ ಪವನ ಮತ್ತು ಮೇಘದೂತ್‌ದಲ್ಲಿ ಮಡಿದ ಹಾಗೂ ಗಾಯಗೊಂಡ ಯೋಧರ ವಿಧವೆಯರು : ಅವಲಂಬಿತರಿಗೆ ನೀಡುತ್ತಿರುವ ಸೌಲಭ್ಯಗಳು:

25. ಅನುಗ್ರಹ ಪೂರ್ವಕ ಅನುದಾನ:
ಯುದ್ಧ ವಿಧವೆ ರೂ. 2 ಲಕ್ಷ ಮತ್ತು ಗಾಯಗೊಂಡ : ನಾಪತ್ತೆಯಾದ ರೂ. 50,000.
26. ಪ್ರತಿಯೊಂದು ಹೆಣ್ಣು ಮಕ್ಕಳ ಮದುವೆಗೆ ರೂ. 8000 ಗಳ ಅನುದಾನ.
27. 01–11–1978 ಕ್ಕಿಂತ ಮೊದಲಿನ ಯುದ್ಧ ವಿಧವೆಯರಿಗೆ ರೂ. 500 ಗೌರವಧನ.
28. ಯುದ್ಧ ವಿಧವೆ : ಅವಲಂಬಿತರಿಗೆ ಎರಡು ಎಕರೆ ನೀರಾವರಿ ಅಥವಾ ನಾಲ್ಕು ಎಕರೆ ಮಳೆ ಆಧರಿತ ಅಥವಾ ಎಂಟು ಎಕರೆ ಒಣ ಜಮೀನು ಅಥವಾ ರೂ. 25,000 ಜಮೀನಿಗೆ ಬದಲಾಗಿ ನಗದು ಅನುದಾನ.
29. ಅಧಿಕಾರಿಗಳಿಗೆ 60X10 ಮತ್ತು ಉಳಿದವರಿಗೆ 30X40 ಅಳತೆಯ ನಿವೇಶನದಲ್ಲಿ ಮನೆ.
30. ರೂ. 20,000 ಮನೆ ರಿಪೇರಿ ಅನುದಾನ.
31. ಮಾಜಿ ಸೈನಿಕರಿಗೆ ಕಾಯ್ದಿರಿಸಿದ ಹುದ್ದೆಗಳಲ್ಲಿ ಎರಡು ಜನ ಯುದ್ಧ ಸಂತ್ರಸ್ಥ ಸದಸ್ಯರ ವರೆಗೆ ಉದ್ಯೋಗಾವಕಾಶ.
32. 1984ರ ನಂತರದ ಯುದ್ಧ ಮಾಡಿದ ಯೋಧರ ಮಕ್ಕಳಿಗೆ ಪೂರ್ಣ ಟ್ಯೂಷನ್ ಫೀ, ಹಾಸ್ಟಲ್ ಖರ್ಚು, ಸಮವಸ್ತ್ರ, ಪುಸ್ತಕ ಮತ್ತು ಲೇಖನ ಸಾಮಗ್ರಿಗಳ ಖರ್ಚು ಭರಿಸಲಾಗುತ್ತಿದೆ.

ಆಪರೇಶನ ವಿಜಯ್ (ಕಾರ್ಗಿಲ್ ಯುದ್ಧ)

33. ಅನುಗ್ರಹ ಪೂರ್ವಕ ಅನುದಾನ ರೂ. 2.00 ಲಕ್ಷ
34. ಪುಕ್ಕಟೆ ಮನೆ.
35. ರೂ. 25,000 ಜಮೀನು ಬದಲಾಗಿ ನಗದು ಅನುದಾನ ದಿನಾಂಕ: 21–11–2004 ರಿಂದ ರೂ. 1,00,000.
36. ಮಕ್ಕಳಿಗೆ ಶಿಕ್ಷಣ ರಿಯಾಯಿತಿ
37. ಉದ್ಯೋಗದಲ್ಲಿ ಆದ್ಯತೆ.

228 (20) : ಶ್ರೀ ಬೋಪಯ್ಯ, ಕೆ.ಜಿ. (ಮಡಿಕೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಡಿಕೇರಿ ನಗರಸಭೆಯಲ್ಲಿರುವ ಇಂಜಿನಿಯರ್ ಹುದ್ದೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು?

ಆ) ಖಾಲಿ ಇರುವ ಸಿಬ್ಬಂದಿಗಳೆಷ್ಟು?

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಒಟ್ಟು ಹುದ್ದೆ –5
ಖಾಲಿ ಇರುವ ಹುದ್ದೆಗಳು –4